# ನಿವೇದನೆ

## ಗ್ರಾಮ ಮಟ್ಟದಲ್ಲೇ ಮದುವೆಗಳ ನೋಂದಣಿ ಬಾಲ್ಯ ವಿವಾಹ ತಡೆಗಟ್ಟುವ ಮಹತ್ವದ ಹೆಜ್ಜೆ

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರ್ಕಾರ ಅನೇಕ ಸವಲತ್ತುಗಳನ್ನು ಕಲ್ಪಿಸಿದ್ದರೂ, ಬಾಲಕಿಯರಿಗೆ ಆದಷ್ಟು ಬೇಗನೆ ಮದುವೆ ಮಾಡಬೇಕೆಂದುಕೊಳ್ಳುವ ಗ್ರಾಮೀಣ ಪ್ರದೇಶಗಳಲ್ಲಿನ ಪೋಷಕರ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಕೊರೊನಾ ಸೋಂಕಿನ ಕಳೆದೆರಡು ವರ್ಷಗಳಲ್ಲಂತೂ ಬಾಲ್ಯ ವಿವಾಹಗಳ ಸಂಖ್ಯೆ ದೇಶದಾದ್ಯಂತ ಹೆಚ್ಚಿದೆ.

ವಿವಾಹ ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸಿರುವ ರಾಜ್ಯಸರ್ಕಾರದ ನಿರ್ಧಾರಕ್ಕೆ ಕೌಟುಂಬಿಕ ಸುರಕ್ಷತೆ ಮತ್ತು ಹೆಣ್ಣುಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಈ ಮೊದಲು ನೂತನ ದಂಪತಿ ತಮ್ಮ ಮದುವೆಯ ನೋಂದಣಿಗಾಗಿ ತಾಲ್ಲೂಕು ಕೇಂದ್ರದಲ್ಲಿನ ಉಪ ನೋಂದಣಾಧಿಕಾರಿಗಳ ಕಚೇರಿಯನ್ನು ಹುಡುಕಿಕೊಂಡು ಹೋಗಬೇಕಾಗಿತ್ತು ಹಾಗೂ ಅಲ್ಲಿ ಕಾಯಬೇಕಾಗಿತ್ತು. ಅಷ್ಟು ದೂರ ಹೋಗುವುದಕ್ಕೆ ಹಿಂಜರಿದು ಗ್ರಾಮೀಣ ಪ್ರದೇಶಗಳ ಬಹುತೇಕರು ತಮ್ಮ ಮದುವೆಗಳನ್ನು ನೋಂದಾಯಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಈಗ ವಿವಾಹ ನೋಂದಣಿ ಮಾಡುವ ಅಧಿಕಾರವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒಗಳಿಗೆ) ರಾಜ್ಯ ಸರ್ಕಾರ ನೀಡಿದೆ. ಇದರಿಂದಾಗಿ ಹಳ್ಳಿಗಳಲ್ಲೇ ವಿವಾಹಗಳನ್ನು ನೋಂದಾಯಿಸುವುದು ಸಾಧ್ಯವಾಗಲಿದೆ ಹಾಗೂ ಮದುವೆಗಳ ನೋಂದಣಿಯ ಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳವಾಗುತ್ತದೆಂದು ನಿರೀಕ್ಷಿಸಲಾಗಿದೆ.

ವಿವಾಹ ನೋಂದಣಿ ಪ್ರಕ್ರಿಯೆಯನ್ನು ಗ್ರಾಮಮಟ್ಟದಲ್ಲೇ ಮಾಡುವುದಕ್ಕೆ ಅವಕಾಶ ಕಲ್ಪಿಸಿರುವುದು ಅತ್ಯಂತ ಸರಳ ಆಡಳಿತಾತ್ಮಕ ನಿರ್ಧಾರದಂತೆ ಕಾಣಿಸಿದರೂ, ಅದರ ಉಪಯೋಗಗಳು ಸಾಕಷ್ಟಿವೆ. ಬಹುತೇಕ ಮದುವೆಗಳು ಕಾನೂನಿನ ಚೌಕಟ್ಟಿನೊಳಗೆ ಬರುವುದರ ಜೊತೆಗೆ, ಮದುವೆಯೂ ಸೇರಿದಂತೆ ಜನನ–ಮರಣ ನೋಂದಣಿಗೆ ಸಂಬಂಧಿಸಿದ ಸಮಗ್ರ ಮಾಹಿತಿ ಗ್ರಾಮೀಣ ಮಟ್ಟದಲ್ಲೇ ಸಂಗ್ರಹವಾಗಲಿದೆ. ಈ ದತ್ತಾಂಶ ಬ್ಯಾಂಕ್‌ನಿಂದಾಗಿ ಸರ್ಕಾರಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅನುಕೂಲವಾಗಲಿದೆ.

ಬಾಲ್ಯ ವಿವಾಹಗಳನ್ನು ತಡೆಗಟ್ಟುವಲ್ಲಿ ಹಾಗೂ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ವಿವಾಹ ನೋಂದಣಿ ಪ್ರಕ್ರಿಯೆ ಪ್ರಮುಖ ಪಾತ್ರ ವಹಿಸಲಿದೆ ಎನ್ನುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಲೆಕ್ಕಾಚಾರ. ಪಿಡಿಒಗಳು ಸ್ಥಳೀಯರಾದುದರಿಂದ ಅವರಿಗೆ ಊರಿನ ಎಲ್ಲರ ಪರಿಚಯವಿರುತ್ತದೆ; ಹಾಗಾಗಿ, ಬಾಲ್ಯ ವಿವಾಹದ ಮಾಹಿತಿ ಅವರಿಗೆ ಸುಲಭವಾಗಿ ದೊರೆಯಲಿದೆ. ಈವರೆಗೆ ತಾಲ್ಲೂಕು ಮಟ್ಟದಲ್ಲಿ ವಿವಾಹಗಳ ನೋಂದಣಿ ಆಗುತ್ತಿದ್ದುದರಿಂದ, ಅನೇಕ ಬಾಲ್ಯ ವಿವಾಹಗಳ ನೋಂದಣಿ ಆಗಿರುವುದೂ ಇದೆ. ಇಂಥ ಅಚಾತುರ್ಯಗಳು ಗ್ರಾಮಮಟ್ಟದಲ್ಲಿ ಸುಲಭವಲ್ಲ.

ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರ್ಕಾರ ಅನೇಕ ಸವಲತ್ತುಗಳನ್ನು ಕಲ್ಪಿಸಿದ್ದರೂ, ಬಾಲಕಿಯರಿಗೆ ಆದಷ್ಟು ಬೇಗನೆ ಮದುವೆ ಮಾಡಬೇಕೆಂದುಕೊಳ್ಳುವ ಗ್ರಾಮೀಣ ಪ್ರದೇಶಗಳಲ್ಲಿನ ಪೋಷಕರ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಕೊರೊನಾ ಸೋಂಕಿನ ಕಳೆದೆರಡು ವರ್ಷಗಳಲ್ಲಂತೂ ಬಾಲ್ಯ ವಿವಾಹಗಳ ಸಂಖ್ಯೆ ದೇಶದಾದ್ಯಂತ ಹೆಚ್ಚಿದೆ. ಕರ್ನಾಟಕದಲ್ಲಂತೂ ದೇಶದಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಬಾಲ್ಯ ವಿವಾಹಗಳು ನಡೆಯುತ್ತಿವೆ. ಚಿಕ್ಕ ವಯಸ್ಸಿಗೆ ಮದುವೆಯಾಗುವುದರಿಂದ ಆಡುವ ವಯಸ್ಸಿನಲ್ಲೇ ತಾಯಂದಿರಾಗುವ ಹೆಣ್ಣುಮಕ್ಕಳ ಸಂಖ್ಯೆಯೂ ಹೆಚ್ಚುತ್ತಿದೆ. 15ರಿಂದ 19 ವರ್ಷದೊಳಗಿನ ಹೆಣ್ಣುಮಕ್ಕಳು ಗರ್ಭ ಧರಿಸುವ ಪ್ರಕರಣಗಳು ವಿಜಯಪುರ, ರಾಯಚೂರು ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಹೆಚ್ಚು. ಕನಿಷ್ಠ ಹತ್ತೊಂಬತ್ತನೇ ವಯಸ್ಸಿನವರೆಗಾದರೂ ಗರ್ಭಧಾರಣೆ ಬೇಡ ಎಂದು ತಜ್ಞರು ಹೇಳುತ್ತಿದ್ದರೂ, ಅಪ್ರಾಪ್ತ ವಯಸ್ಸಿಗೆ ಗರ್ಭ ಧರಿಸುವ ಪ್ರಕರಣಗಳು ಹೆಚ್ಚುತ್ತಲೇ ಇರುವುದನ್ನು ‘ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 4 ಮತ್ತು 5ರ ವರದಿಗಳು ಸ್ಪಷ್ಟಪಡಿಸಿವೆ. ಶೇ. 21ಕ್ಕಿಂತಲೂ ಹೆಚ್ಚಿನ ಹುಡುಗಿಯರಿಗೆ ಹದಿನೆಂಟು ತುಂಬುವ ಮೊದಲೇ ಮದುವೆಯಾಗುತ್ತಿರುವುದನ್ನೂ ಈ ಸಮೀಕ್ಷೆಗಳು ದೃಢಪಡಿಸಿವೆ. ಕಾರ್ಮಿಕ ವಲಯದಲ್ಲಿ ಗರ್ಭ ನಿರೋಧಕಗಳ ಬಳಕೆಯೂ ಅಷ್ಟೇನೂ ಜನಪ್ರಿಯವಲ್ಲ.

ಬಾಲ್ಯ ವಿವಾಹವನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿವಾಹ ನೋಂದಣಿಯನ್ನು ಕಡ್ಡಾಯಗೊಳಿಸಬೇಕು ಎನ್ನುವುದು ಸಾಮಾಜಿಕ ಕಾರ್ಯಕರ್ತರ ಒತ್ತಾಯ. ಪ್ರಸ್ತುತ ‘ಹಿಂದೂ ವಿವಾಹ ಕಾಯ್ದೆ–1955’, ನೋಂದಣಿ ಆಗದಿದ್ದರೂ ಹಿಂದೂ, ಸಿಖ್ ಹಾಗೂ ಜೈನ ಮದುವೆಗಳು ಕಾನೂನುಬದ್ಧವೆಂದು ಹೇಳುತ್ತದೆ. ಆ ಕಾರಣದಿಂದಲೇ ವಿವಾಹ ನೋಂದಣಿಯ ಬಗ್ಗೆ ಹೆಚ್ಚಿನವರು ಆಸಕ್ತಿ ವಹಿಸುವುದಿಲ್ಲ. ಮದುವೆಯ ಪುರಾವೆಗಾಗಿ ಆಮಂತ್ರಣ ಪತ್ರಿಕೆ ಹಾಗೂ ಛಾಯಾಚಿತ್ರಗಳನ್ನು ಬಳಸಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ವಿವಾಹ ನಡೆದಿರುವುದಕ್ಕೆ ಸರಿಯಾದ ದಾಖಲೆಗಳಿಲ್ಲದೆ ಹೆಣ್ಣುಮಕ್ಕಳು ಸಮಸ್ಯೆ ಎದುರಿಸಿರುವುದೂ ಇದೆ. ನೋಂದಣಿಯಾದ ವಿವಾಹ ಕಾನೂನಿನ ಚೌಕಟ್ಟಿನೊಳಗೆ ಬರುವುದರ ಜೊತೆಗೆ, ಹೆಣ್ಣುಮಕ್ಕಳಿಗೆ ವಿವಾಹದ ಸುರಕ್ಷತೆಯನ್ನೂ ಖಾತರಿಗೊಳಿಸುತ್ತದೆ.

ಕಡ್ಡಾಯಗೊಳಿಸದ ಹೊರತು, ವಿವಾಹ ನೋಂದಣಿಗಳು ಪೂರ್ಣ ಪ್ರಮಾಣದಲ್ಲಿ ನಡೆಯುವುದಿಲ್ಲ. ವಿವಾಹ ನೋಂದಣಿ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಮೊದಲ ಹೆಜ್ಜೆಯ ರೂಪದಲ್ಲಿ, ಗ್ರಾಮಗಳ ಹಂತದಲ್ಲೇ ಮದುವೆಗಳನ್ನು ನೋಂದಾಯಿಸಲು ಅವಕಾಶ ಕಲ್ಪಿಸಿರುವ ನಿರ್ಧಾರವನ್ನು ಗುರ್ತಿಸಬಹುದು. ವಿವಾಹ ನೋಂದಣಿಯನ್ನು ಕಡ್ಡಾಯಗೊಳಿಸುವ ಸಾಧ್ಯತೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಹಾಗೂ ನೋಂದಣಿಯ ಅಗತ್ಯವನ್ನು ಜನರಿಗೆ ಮನವರಿಕೆ ಮಾಡುವ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು.




ಈಶ್ವರ್

■ ರಘುನಾಥ ಚ.ಹ.